ಬುಲ್‌ಡಾಗೊಂದು ಅಡಿಗೆರಗಿದಂತೆ ಆತ ನಡುಬಗ್ಗಿಸಿ ಕುಳಿತಿದ್ದ! ಮುಂದೇನು ಮಾಡುವುದು? ಸಣಕಲ ಮುಖ್ಯ ಮೇಲ್ವಿಚಾರಕರನ್ನು ಕರೆದೆ. 'ಏನು ಗ್ರಹಚಾರ ಕಾದಿದೆಯೋ' ಎಂಬ ಮುಖಭಾವದೊಂದಿಗೆ ಹೆದರುತ್ತಲೇ ಒಳಗಡಿಯಿಟ್ಟ ಅವರ ಬಳಿ ವಶಪಡಿಸಿಕೊಂಡ ಮೊಬೈಲನ್ನು ಕೀರ್ತಿ ಪತಾಕೆಯಂತೆ ಹಾರಿಸಿ ಕೊಟ್ಟೆ. ಇನ್ನು ಅವರುಂಟು ಆಜಾನುಬಾಹುವುಂಟು. ಮೊಬೈಲು ಇದ್ದರೂ ನಾನು ಆತನ ಸುತ್ತಲೇ ಠಳಾಯಿಸುತ್ತಲೇ ಇದ್ದಿದ್ದರಿಂದ ಅದನ್ನು ನಕಲು ಮಾಡಲು ಉಪಯೋಗಿಸುವ ಸಂದರ್ಭ ಒದಗಿ ಬಂದಿರಲಿಲ್ಲ. ಹೀಗಾಗಿ ಅರ್ಧಗಂಟೆಯ ಕಾಲ ಆತನ ಉತ್ತರ ಪತ್ರಿಕೆಯನ್ನು ನಮ್ಮ ಬಳಿಯೇ ಇಟ್ಟುಕೊಂಡು ನಂತರ ಕರುಣೆಯಿಂದ ಬರೆಯಲು ಕೊಟ್ಟೆವು. ಅಷ್ಟರವರೆಗೂ ಯೋಗ ಸಾಧನೆ ಮಾಡುತ್ತಿರುವವನಂತೆ ಪೋಸುಕೊಡುತ್ತಿದ್ದಾತ ತನ್ನ ಬೆನ್ನನ್ನು ಧನಸ್ಸಿನಂತೆ ಬಾಗಿಸಿ, ಮೋರೆಯನ್ನು ಯಾರಿಗೂ ತೋರಗೊಡದೆ, ಹುದುಗಿಕೊಂಡು ಬರೆಯತೊಡಗಿದ. ಇದು ಒಂದು ಮಹತ್ತರವಾದ ಅನುಭವವಲ್ಲವೇ? ಯುದ್ಧದಲ್ಲಿ ಯಾವಾಗ ಏನು ಬೇಕಾದರೂ ಆಗಬಹುದೆಂಬುದಕ್ಕೆ ಮೇಲಿನ ಉದಾಹರಣೆಯೇ ಸಾಕಲ್ಲವೇ?

ಬೇರೊಂದು ಮೆಲ್ವಿಚಾರಣೆಯ ಸಂದರ್ಭವು ಬಿರು ಬೇಸಿಗೆಯಲ್ಲಾಗಿತ್ತು. ತುಟಿಗಳ ಬಳಿ ಸುಳಿದಾಡುತ್ತಿದ್ದ, ಕಿವಿಗಳಲ್ಲಿ ಗುಂಯ್sss ಎಂದು ಲಾಲಿ ಹಾಡುತ್ತಿದ್ದ ನೊರಜುಗಳನ್ನು ಓಡಿಸುತ್ತಾ ಎಲ್ಲರೂ ಬರೆಯಲು ಹರಸಾಹಸ ಪಡುತ್ತಿರಬೇಕಾದರೆ ಹಲಸಿನ ಹಣ್ಣನ್ನು ಮಿತಿಮೀರಿ ತಿಂದ ನನ್ನದೇ ಹೆಸರಿನ ಒಬ್ಬ ವಿದ್ಯಾರ್ಥಿಯು ಮುಳ್ಳಿನ ಮೇಲೆ ಕುಳಿತವನಂತೆ ಕುಳಿತಿದ್ದ. ನನ್ನ ಹಲವಾರು ಛಾಯಾಚಿತ್ರಗಳನ್ನು ತೆಗೆದುಕೊಟ್ಟಿದ್ದ ಆತನ ಬಳಿ ಸಲಿಗೆಯಿಂದ ಹೋಗಿ ವಿಚಾರಿಸಲಾಗಿ ಆತನೋ ಬಾಯಿಬಿಡಲೊಲ್ಲ! ಕಡಗೊಮ್ಮೆ ತುಟಿಗಚ್ಚಿ, 'ಸಾsssರ್! ಹಲಸಿನ ಹಣ್ಣು... ಬಿರೀತಾ ಇದೆ ಹೊಟ್ಟೇಲಿ, ತಡೆಯೋಕಾಗ್ತಿಲ್ಲಾ...' ಎಂದ. ಅಟೆಂಡರ್‌ನನ್ನು ಕೂಗಿ ಕರೆಯುವುದರೊಳಗೆ ಸಮೀಪದಲ್ಲಿನ ಪಾಯಿಖಾನೆಗೆ ದೌಡಾಯಿಸಿ ಹಗುರಾಗಿ ಬಂದದ್ದು ಮೊನ್ನೆಮೊನ್ನೆ ನಡೆದಂತಿದೆ. ಇನ್ನು ಅದೇ ಬ್ಯಾಚಿನ ಹುಡುಗಿಯೊಬ್ಬಳು ಒಂದೇ ಪೆನ್ನಿನೊಂದಿಗೆ ಪರೀಕ್ಷೆಗೆ ಬಂದು, ಶಾಯಿ ಖಾಲಿಯಾಗಿ, ಅರ್ಧದಲ್ಲಿಯೇ ನನ್ನ ಪೆನ್ನನ್ನು ಪಡೆದು ಬರೆದದ್ದೂ ನನಗೆ ಸೋಜಿಗ. ಅಡಿಯಿಂದ ಮುಡಿಯವರೆಗೆ ಶೃಂಗರಿಸಿಕೊಂಡು ಮಿಸ್ ಯೂನಿವರ್ಸ್ ಸ್ಪರ್ಧಿಯಂತೆ ತೋರುತ್ತಿದ್ದ ಆಕೆ ಐದು ರೂಪಾಯಿಯ ಪೆನ್ನನ್ನು ತೆಗೆದುಕೊಳ್ಳುವುದಕ್ಕೆ ಯಾಕೆ ಜಿಪುಣತನ ಮಾಡಿದಳು ಎನ್ನುವುದೇ ಆಶ್ಚರ್ಯದ ಸಂಗತಿ. ಅಲ್ಲಾsss... ನನ್ನ ಪೆನ್ನಿನಿಂದ ಬರೆದರೆ ನಂದೇನೂ ಸವೆಯುವುದಿಲ್ಲ. ಆದರೆ ಸಮಯ ಸಂದರ್ಭ ನೋಡಿಕೊಳ್ಳಬೇಕಲ್ಲವೇ? ಪಾಠದ ಅವಧಿಯಲ್ಲಿ ಸಿಕ್ಕ ಹಾಳೆಯಲ್ಲಿ ನೋಟ್ಸ್ ಮಾಡುವಾಗಲೂ, ಪರೀಕ್ಷೆಯಲ್ಲಿ ಬರೆಯುವಾಗಲೂ ಸಂದರ್ಭಗಳು ಒಂದೇ ತೆರನಾಗಿರುವುದಿಲ್ಲ.

ಆದರೆ, ಈ ರೀತಿ ವಿದ್ಯಾರ್ಥಿಗಳ ಬಳಿಗೆ ಹೋಗಿ ಬರುವುದು ಸುಲಭವಲ್ಲ. ಯಾಕಂತೀರಾ? ಕೆಲವೊಬ್ಬರು ಪರೀಕ್ಷೆಯ ಅಭ್ಯಾಸದಲ್ಲಿ ಮೈಮರೆತು ಸ್ನಾನ ಮಾಡಿರುವುದಿಲ್ಲ. ಇನ್ನು ಕೆಲವರು ವಾರಗಟ್ಟಲೇ ಹಾಕಿದ ಕಾಲುಚೀಲಗಳನ್ನು ಸಮಯದ ಅಭಾವದಿಂದಾಗಿ ಪರೀಕ್ಷೆಯ ಸಂದರ್ಭದಲ್ಲಿಯೂ ತೊಳೆಯದೇ, ಹಾಗೆಯೇ ಧರಿಸಿಕೊಂಡು ಬಂದು, ಬೂಟಿನಿಂದ ಕಾಲುಗಳನ್ನು ತೆಗೆದು ಸುತ್ತಮುತ್ತಲಿನ ಪರಿಸರವನ್ನು ಕಲುಷಿತಗೊಳಿಸುತ್ತಿರುತ್ತಾರೆ. ಅಬ್ಬಾ! ಆ ವಾಸನೆಯೋ? ಬಳಿಯೇ ಯಾರೋ ವಾಂತಿ ಮಾಡಿದಂತೆ ಭಾಸವಾಗುತ್ತಿರುತ್ತದೆ. ಅದರ ಜನಕರು ಮಾತ್ರ ಅದೇ ವಾಸನೆಯಲ್ಲಿ ತೇಲುತ್ತಾ ತಮ್ಮದೇ ರೂಮಿನಲ್ಲಿ ಕುಳಿತಿರುವಂತೆ ಪರವಶರಾಗಿ ಬರೆಯುತ್ತಿರುತ್ತಾರೆ. ಇನ್ನು ಕೆಲವರು ಯಾವುದ್ಯಾವುದೋ ಬ್ರ್ಯಾಂಡಿನ ಡಿಯೋಡರೆಂಟುಗಳನ್ನು ಮೈಯೆಲ್ಲಾ ಪೂಸಿಕೊಂಡು ತಲೆ ನೋಯುವಷ್ಟು ಪರಿಮಳವನ್ನು ಬೀರುತ್ತಿರುತ್ತಾರೆ! ಕೆಲವರು ನವರತ್ನವೋ,